ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA

ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಶತಕದತ್ತ ಓಟ... ತೊಂಬತ್ತರ ನೋಟ

# ಬೆಳಗಾವೀಲಿ ಪ್ರಥಮ ಮುಂಗಾರು ಕಲಾಪ?

## ಸುವರ್ಣಸೌಧ ನಿರ್ಮಾಣವಾಗಿ 13 ವರ್ಷ ಬಳಿಕ ಹೊಸ ಮುನ್ನುಡಿ

▪ ಶಿವಕುಮಾರ್ ಮೆಣಸಿನಕಾಯಿ

**ಬೆಂಗಳೂರು:** ಈಗಾಗಲೇ ಅತಿ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಸಾಧನೆ ಮಾಡಿರುವ ಸಿದ್ದರಾಮಯ್ಯ ಅವರು ಇದೀಗ ಮತ್ತೊಂದು ದಾಖಲೆ ಸ್ಥಾಪಿಸಲು ವೇದಿಕೆ



ಸಿದ್ಧಪಡಿಸುತ್ತಿದ್ದಾರೆ. ಕರ್ನಾಟಕ ವಿಧಾನ ಮಂಡಲದ ಮುಂಗಾರು ಅಧಿವೇಶನ ಇತಿಹಾಸದಲ್ಲೇ ಮೊದಲ ಬಾರಿಗೆ ಬೆಳಗಾವಿಯ ಸುವರ್ಣಸೌಧದಲ್ಲಿ ಜೂನ್ ಎರಡನೇ ವಾರ ನಡೆಯಲಿದೆ. ಹೌದು, ಸಿಎಂ ಸಿದ್ದರಾಮಯ್ಯ ಈಗಾಗಲೇ ಉಭಯ ಸದನಗಳ ಅಧ್ಯಕ್ಷರ ಜೊತೆ ಚರ್ಚೆ ನಡೆಸಿದ್ದು, ಎಲ್ಲವೂ ಅಂದುಕೊಂಡಂತೆ ನಡೆದರೆ ಜೂನ್ ಎರಡನೇ ವಾರದಿಂದ 10 ದಿನ ಮುಂಗಾರು ಕಲಾಪ ಸುವರ್ಣ ಸೌಧದಲ್ಲಿ ನಡೆಯಲಿದೆ.

ಪುಟ 10

- ಜೂನ್ ಎರಡನೇ ವಾರದಲ್ಲಿ 10 ದಿನ ಮುಂಗಾರು ಅಧಿವೇಶನಕ್ಕೆ ಸರ್ಕಾರ ಸಜ್ಜು
- ಇದೇ ಮೊದಲ ಬಾರಿಗೆ ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯಲಿದೆ ಕಲಾಪ
- ಕಳೆದ 25 ವರ್ಷಗಳಿಂದ ಚಳಿಗಾಲದ ಅಧಿವೇಶನಕ್ಕೆ ಸೀಮಿತವಾಗಿದ್ದ ಬೆಳಗಾವಿ
- 2012ರಲ್ಲಿ ಸುವರ್ಣಸೌಧ ನಿರ್ಮಾಣ ಆದ್ಮೇಲೆ ಮೊಲದ ಮುಂಗಾರು ಕಲಾಪ
- ಇತಿಹಾಸದಲ್ಲೇ ಮುಂಗಾರು ಅಧಿವೇಶನ ಬೆಳಗಾವಿಯಲ್ಲಿ ನಡೆಸಿ ಮತ್ತೊಂದು ಹೊಸ ದಾಖಲೆಗೆ ಸಿಎಂ ಸಿದ್ದು ಒಲವು

### ಸಿಎಂ ಜತೆ ಚರ್ಚಿಸಿದ್ದೇನೆ



“ಬೆಳಗಾವಿಯಲ್ಲಿ ಮುಂಗಾರು ಅಧಿವೇಶನ ನಡೆಸುವ ಮೂಲಕ ಉತ್ತರ ಕರ್ನಾಟಕದಲ್ಲಿ ನಡೆಯುವ ಶಾಸನ ಸಭೆಯ ಚರ್ಚೆಗಳು ಮತ್ತಷ್ಟು ಗಂಭೀರ ಸ್ವರೂಪ ಪಡೆಯಬೇಕೆಂಬುದು ನನ್ನ ಅಭಿಪ್ರಾಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಗಾವಿಯಲ್ಲಿ ಮುಂಗಾರು ಅಧಿವೇಶನ ನಡೆಸುವ ಬಗ್ಗೆ ನನ್ನೊಂದಿಗೆ ಚರ್ಚಿಸಿದ್ದಾರೆ. ಈ ಬಗ್ಗೆ ಸರ್ಕಾರ ಅಂತಿಮ ನಿರ್ಧಾರ ಪ್ರಕಟಿಸಲಿದೆ.

▪ ಬಸವರಾಜ್ ಹೊರಟ್ಟಿ,
ವಿಧಾನ ಪರಿಷತ್ ಸಭಾಪತಿ

Bangalore Edition
May 07, 2026 Page No. 01
Powered by: erelego.com